# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **201** |
| **ಸದಸ್ಯರ ಹೆಸರು** | **ಶ್ರೀ ಕೆ.ಎ. ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | **14.02.2023** |
| **ಉತ್ತರಿಸಬೇಕಾದ ಸಚಿವರು** | **ಮಾನ್ಯ ವಿದ್ಯುನ್ಮಾನ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.** |
| **ಪ್ರಶ್ನೆ** | **ಉತ್ತರ** |
| ಅ) ಭಾರತ ಸರ್ಕಾರ ಸೆಮಿ ಕಂಡಕ್ಟರ್ ತಯಾರಿಕೆ ವಲಯಕ್ಕೆ ಸಾಕಷ್ಟು ಮಹತ್ವ ನೀಡುತ್ತಿದ್ದು, ರಾಜ್ಯ ಸರ್ಕಾರ ಸೆಮಿ ಕಂಡಕ್ಟರ್ ತಯಾರಿಕೆಗೆ ರಾಜ್ಯದಲ್ಲಿ ಗುರುತಿಸಿರುವ ಪ್ರದೇಶಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಸರ್ಕಾರವು MeitY ಮುಖಾಂತರ "Semiconductor ಹಾಗೂ Display Manufacturing ecosystem in India" ಅಭಿವೃದ್ಧಿಗಾಗಿ ರೂ.76,000 ಕೋಟಿಗಳ ($10 Bn) ಯೋಜನೆಗಳನ್ನು ರೂಪಿಸಿದ್ದು, ಕರ್ನಾಟಕ ಸರ್ಕಾರವು ಸೆಮಿಕಂಡಕ್ಟರ್ ತಯಾರಿಕೆಗಾಗಿ ಕಂಪನಿಗಳನ್ನು ಆಕರ್ಷಿಸಲು ಮೈಸೂರು ಜಿಲ್ಲೆಯ ಕೋಚನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 500 ಎಕರೆ ಜಮೀನು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹರಳೂರು ಕೈಗಾರಿಕಾ ಪ್ರದೇಶದಲ್ಲಿ ಸುಮಾರು 250 ಎಕರೆ ಜಮೀನು ಗುರುತಿಸಲಾಗಿದೆ. |
| ಆ) ರಾಜ್ಯ ಸರ್ಕಾರ ಸೆಮಿ ಕಂಡಕ್ಟರ್ ಚಿಪ್ ತಯಾರಿಕೆಗೆ ಯಾವ ಯಾವ ಸಂಸ್ಥೆಗಳಿಗೆ ಆಹ್ವಾನ ನೀಡಿದೆ; ಅಥವಾ ಒಪ್ಪಂದ ಮಾಡಿಕೊಂಡಿದೆ; (ಪೂರ್ಣ ವಿವರ ನೀಡುವುದು) | M/s. ISMC Analog Fab Pvt. Ltd., Vedanta Foxconn JV ಮತ್ತು IGSS Ventures ಸಂಸ್ಥೆಗಳು Semi Conductor Fab ಯೋಜನೆಯಡಿ Electronic Chip ತಯಾರಿಕಾ ಘಟಕವನ್ನು ಸ್ಥಾಪಿಸಲು MeitYಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತವೆ. M/s. ISMC Analog Fab Pvt. Ltd., ಸಂಸ್ಥೆಯು ಕರ್ನಾಟಕದ ಮೈಸೂರಿನಲ್ಲಿ Semi Conductor Fab ಘಟಕವನ್ನು ಸ್ಥಾಪಿಸಲು ಆಸಕ್ತಿ ತೋರಿದ್ದು, ಅಂತೆಯೇ ಆ ಸಂಸ್ಥೆಯು ರಾಜ್ಯ ಸರ್ಕಾರದ ಜೊತೆಗೆ MoUಗೆ ಸಹಿ ಮಾಡಿಕೊಂಡಿರುತ್ತದೆ. ಅನಲಾಗ್ ಫ್ಯಾಬ್ ಘಟಕವನ್ನು ಸ್ಥಾಪಿಸಲು M/s. ISMC ಸಂಸ್ಥೆಗೆ ಕರ್ನಾಟಕ ಸರ್ಕಾರವು ವಿಶೇಷ ಪ್ರೋತ್ಸಾಹಕ ಮತ್ತು ರಿಯಾಯಿತಿಗಳನ್ನು ನೀಡಲು ತಾತ್ವಿಕ ಅನುಮೋದನೆ ನೀಡಿದೆ. M/s. ISMC ಸಂಸ್ಥೆಯು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. |
| ಇ) ಕೇಂದ್ರ ಸರ್ಕಾರದ ನೀತಿಯಂತೆ, ಸೆಮಿ ಕಂಡಕ್ಟರ್ ವಲಯದಲ್ಲಿ ಚಿಪ್ ಉತ್ಪಾದಕರಿಗೆ ಕೇಂದ್ರ-ರಾಜ್ಯ ಸರ್ಕಾರಗಳಿಂದ ದೊರೆಯುವ ಆರ್ಥಿಕ ಸಹಾಯ ಮತ್ತು ಸವಲತ್ತುಗಳು ಯಾವುವು; (ಪೂರ್ಣ ವಿವರ ನೀಡುವುದು) | ಕೇಂದ್ರ ಸರ್ಕಾರದ ನೀತಿಯಂತೆ, ಸೆಮಿ ಕಂಡಕ್ಟರ್ ವಲಯದಲ್ಲಿ ಚಿಪ್ ಉತ್ಪಾದಕರಿಗೆ ಕೇಂದ್ರ ಸರ್ಕಾರವು ಯೋಜನಾ ವೆಚ್ಚದ ಶೇ.50ರಷ್ಟು ಹಣಕಾಸಿನ ಬೆಂಬಲವನ್ನು ನೀಡಲಿದೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರ ಅಥವಾ ಅದರ ಯಾವುದೇ ಏಜೆನ್ಸಿಗಳು ನೀಡುವ ಯಾವುದೇ ಹೆಚ್ಚುವರಿ ಹಣಕಾಸಿನ ಬೆಂಬಲವನ್ನು ಸಹ ಪಡೆಯಬಹುದಾಗಿದೆ.<br><br>ಸೆಮಿಕಂಡಕ್ಟರ್ ಫ್ಯಾಬ್ ತಯಾರಿಕೆಯು ಸಾವಿರಾರು ಕೋಟಿ ಬಂಡವಾಳ ಹೂಡಿಕೆಯನ್ನು ಒಳಗೊಂಡಿರುವ ಹಾಗೂ ಹೆಚ್ಚಿನ ಬಂಡವಾಳ ತೀವ್ರತೆಯನ್ನು ಹೊಂದಿರುವಂತಹ ಮೆಗಾ ಯೋಜನೆಯಾಗಿದ್ದು, ಇಂತಹ ಮೆಗಾ ಯೋಜನೆಗಳಿಗೆ ರಾಜ್ಯ ಸರ್ಕಾರವು ಪ್ರತಿ ಪ್ರಕರಣದ ಆಧಾರದ ಮೇಲೆ ಪರಿಶೀಲಿಸಿ ಸೂಕ್ತವಾದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ವಿಸ್ತರಿಸಬೇಕಿದೆ. |

| | |
|---|---|
| ಈ) ರಾಜ್ಯದಲ್ಲಿ ಸೆಮಿ ಕಂಡಕ್ಟರ್ ಉತ್ಪಾದಕ ಘಟಕಗಳ ಸ್ಥಾಪನೆಯಿಂದ ಸೃಷ್ಟಿಯಾಗುವ ಹುದ್ದೆಗಳು ಎಷ್ಟು? (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಸೆಮಿಕಂಡಕ್ಟರ್ ಉತ್ಪಾದಕ ಘಟಕಗಳ ಸ್ಥಾಪನೆಯಿಂದ ಸಾವಿರಾರು ಉದ್ಯೋಗಗಳು ಸೃಷ್ಟಿಯಾಗುತ್ತವೆ. ಪ್ರಸ್ತುತ M/s. ISMC ಸಂಸ್ಥೆ ತಿಳಿಸಿರುವ ಪ್ರಕಾರ, M/s. ISMC Analog Fab Pvt. Ltd., ನ ಪ್ರಸ್ತಾಪಿತ ಸೆಮಿಕಂಡಕ್ಟರ್ ಫ್ಯಾಬ್ ಘಟಕ ಸ್ಥಾಪನೆಯಿಂದ ಸುಮಾರು 1500 ನೇರ ಉದ್ಯೋಗ ಮತ್ತು 6500 ರಿಂದ 8500 ಪರೋಕ್ಷ ಉದ್ಯೋಗ ಸೃಷ್ಟಿಯಾಗಬಹುದೆಂದು ಅಂದಾಜಿಸಲಾಗಿದೆ. |

(ಐಟಿಬಿಟಿ 06 ಎಲ್‌ಸಿಎಂ 2023)

(ಡಾ|| ಅಶ್ವಥ್ ನಾರಾಯಣ ಸಿ. ಎನ್.)
ವಿದ್ಯುನ್ಮಾನ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ಉನ್ನತ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.